ತಾರೀಖು 12ನೇ ನವಂಬರ್ 1889.

ಇದರಿಂದ ತಿಳಿಯಪಡಿಸುವದೇನಂದರೆ, 1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇರುವ ಯಿದರಡಿ ನಮೂದಿಸಲ್ಪಟ್ಟು, ಬೆಂಕಿಯಿಂದ ತಡೆದ ಗವರ್ನಮೆಂಟ್ ಫಾರೆಸ್ಟ್ ಪ್ಲಾಂಟೇಷನ್‌ಗಳು ಷಿಕಾರಿ ಮತ್ತು ಇತರ ಬ್ಯಾಟೆಗಳಿಗೆ ಬಂದ್ ಮಾಡಲ್ಪಟ್ಟಿರುತ್ತವೆ. ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರಿ ಫಾರೆಸ್ಟ್ ವ ಪ್ಲಾಂಟೇಷನ್‌ಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ ಲಿಖಿತಮೂಲಕವಾದ ಹುಕುಂ ಪಡಿಯದೆ ಪ್ರವೇಶ ಮಾಡಕೂಡದು.

ನಂಬರ್.	ಫಾರೆಸ್ಟ್ ವ ಪ್ಲಾಂಟೇಷನ್‌ಗಳ ಹೆಸರು.	ತಾಲ್ಲೂಕು.
1	ವೀರನಹೊಸಹಳ್ಳಿ ಫಾರೆಸ್ಟ್	ಹುಣಸೂರು ತಾಲ್ಲೂಕು
2	ನಾಯಿಹಳ್ಳ ಸಂದಲ್ ಪ್ಲಾಂಟೇಷನ್	ಡಿಟೋ
3	ಗುರುಪುರ ಡಿಟೋ	ಡಿಟೋ
4	ಪಂಚವಳ್ಳಿ ಡಿಟೋ	ಡಿಟೋ
5	ದೊಡ್ಡಹರುವೆ ರಿಪ್ರೊಡಕ್ಷನ್ ಬ್ಲಾಕ್	ಡಿಟೋ
6	ಅನೆಚೌಕೂರು ಡಿಟೋ	ಡಿಟೋ
7	ವೀರನಹೊಸಹಳ್ಳಿ - ಡಿಟೋ	ಡಿಟೋ
8	ಮೇಟಿಕುಪ್ಪೆ ಫಾರೆಸ್ಟ್	ಹೆಗ್ಗಡದೇವನಕೋಟೆ ತಾಲ್ಲೂಕು
9	ಕಾರ್ಕಕೋಟೂ ಫಾರೆಸ್ಟ್	ಡಿಟೋ
10	ಬೇಗೂರು ಫಾರೆಸ್ಟ್	ಡಿಟೊ
11	ಐನೂರು ಮಾರಿಗುಡಿ ಫಾರೆಸ್ಟ್	ಡಿಟೊ
12	ಕಾಕನಕೋಟೂ ಟೀಕ್ ಪ್ಲಾಂಟೇಷನ್	ಡಿಟೋ
13	ಮಾಸ್ತಿಗುಡಿ ಟೀಕ್ ಪ್ಲಾಂಟೇಷನ್	ಡಿಟೋ
14	ಮಂಚೆಗೌಡನಹಳ್ಳಿ ಟೀಕ್‌ಪ್ಲಾಂಟೇಷನ್	ಡಿಟೊ
15	ಹಂಪಾಪುರ ರೀಪ್ರೊಡಕ್ಷನ್ ಬ್ಲಾಕ್	ಡಿಟೋ
16	ಬೇರಂಬಾಡಿ ಫಾರೆಸ್ಟ್	ಗುಂಡ್ಲುಪೇಟೆ ತಾಲ್ಲೂಕು
17	ಬಂಡಿಪುರ ಫಾರೆಸ್ಟ್	ಡಿಟೋ
18	ಮದ್ದೂರು ಆಳೆಲೆ ಪ್ಲಾಂಟೇಷನ್	ಡಿಟೋ
19	ಹಂಗಲಾ ಸಂದಲ್‌ಪ್ಲಾಂಟೇಷನ್	ಡಿಟೋ
20	ಹಿಡಿಯಾಲ್ ಸಂದಲ್‌ಪ್ಲಾಂಟೇಷನ್	ನಂಜನಗೂಡು ತಾಲ್ಲೂಕು
21	ಚಾಮರಾಜನಗರ ಫಾರೆಸ್ಟ್	ಚಾಮರಾಜನಗರ ತಾಲ್ಲೂಕು

ಸ್ಯ 1889ನೇ ಇಸವಿ ನವಂಬರು ತಾರೀಖು 8.

ಇದರಿಂದ ತಿಳಿಯಪಡಿಸುವದೇನಂದರೆ, 1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ ಹಾಸನ ಡಿಸ್ಟ್ರಿಕ್ಟಿನಲ್ಲಿ ಇದರಡಿ ನಮೂದಿಸಲ್ಪಟ್ಟ ಮತ್ತು ಬೆಂಕಿಯಿಂದ ತಡೆಯಲ್ಪಟ್ಟಿರುವ ಫಾರೆಸ್ಟ್ಸುಗಳು ಮತ್ತು ಪ್ಲಾಂಟೇಷನ್‌ಗಳು ಷಿಕಾರಿ ಮತ್ತು ಇತರ ಬ್ಯಾಟೆಗಳಿಗೆ ಬಂದ್ ಮಾಡಲ್ಪಟ್ಟಿರುತ್ತವೆ; ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರಿ ಫಾರೆಸ್ಟ್ ವ ಪ್ಲಾಂಟೇಷನ್‌ಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ ಲಿಖಿತಮೂಲಕವಾದ ಹುಕುಂ ಪಡೆಯದೆ ಪ್ರವೇಶ ಮಾಡಕೂಡದು.

(1)	ಹಿರಿಕಲ್‌ಗುಡ್ಡ ಫಾರೆಸ್ಟ್ ಮತ್ತು ಪ್ಲಾಂಟೇಷನ್	..	ಆರಸೀಕೆರೆ ತಾಲ್ಲೂಕು
(2)	ಗಂಡಿಕಟ್ಟೆ ಕಾವಲ್ ಪ್ಲಾಂಟೇಷನ್	..	ಹಾಸನ ತಾಲ್ಲೂಕು
(3)	ಭಕ್ತರವಳ್ಳಿ ಪ್ಲಾಂಟೇಷನ್	..	ಡಿಟೋ
(4)	ವಿಜಯಾವಾರ ಕಾವಲ್ ಫಾರೆಸ್ಟ್ ಮತ್ತು ಪ್ಲಾಂಟೇಷನ್	..	ಅರಕಲ್‌ಗೂಡು ತಾಲ್ಲೂಕು.

ಯಲ್. ರೈಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 857.

ಕೋಲಾರದಲ್ಲಿ ಇದ್ದು ವ್ಯತಪಟ್ಟ ರಾಮಚಂದ್ರಶಾಸ್ತ್ರಿಗಳ ಆಸ್ತೀ ವಿಷಯದಲ್ಲಿ—

ಅರ್ಜೀದಾರ ಆವನೀವಾಸದ ಸರ್ವಾಧಿಕಾರಿ ಗುರುಮೂರ್ತಿ ಶಾಸ್ತ್ರಿ, ವ್ಯತಪಟ್ಟ ಸದರಿ ರಾಮಚಂದ್ರ ಶಾಸ್ತ್ರಿಗಳಿಗೆ ಮಗನು ಆಗಬೇಕೆಂಬ ಹಕ್ಕುದಾರಿಕೆ ಮೇಲೆ ಕೋಲಾರ ಸ್ಥಳದ ಗುರುಮೂರ್ತಿ ಶಾಸ್ತ್ರಿ, ಕೋಲಾರ ವಾಸಸ್ಥರಾಗಿ ವ್ಯತಪಟ್ಟ ರಾಮಚಂದ್ರಶಾಸ್ತ್ರಿಗಳ ಜಿಂದಗಿ ಬ್ಯಾಗಿ ಬರತಕ್ಕ ನಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಪಾಯಿಷ್ ಮಾಡಿರುತ್ತಾರೆ.